ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣತುಂಗ ಆವರಣ, ಮಂತ್ರಾಲಯ ರಸ್ತೆ, ರಾಷ್ಟ್ರೀಯ ಹೆದ್ದಾರಿ–167, ಯರಗೇರಾ – 584 133, ರಾಯಚೂರು, ಕರ್ನಾಟಕ

**ಕಾಲೇಜು ಅಭಿವೃದ್ಧಿ ಮಂಡಳಿ**

ಕ್ರ.ಸ.:ರಾವಿರಾ/ಸಿಡಿಸಿ/2023–24/143 ದಿನಾಂಕ:13.03.2024

# ಸುತ್ತೋಲೆ

ಈ ಮೂಲಕ ಎಲ್ಲಾ ಸಂಯೋಜಿತ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ತಿಳಿಸುವುದೇನೆಂದರೆ, 2024-25 ನೇ ಸಾಲಿನ ಸಂಯೋಜನಾ ಕಾರ್ಯ ಶೀಘ್ರದಲ್ಲೇ ಪ್ರಾರಂಭವಾಗಲಿದ್ದು, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

1. ಈಗಾಗಲೇ ತಿಳಿಸಿದಂತೆ 2022-23, 2023-24ನೇ ಸಾಲಿನ LIC ವಿಧಿಸಿದ ಷರತ್ತುಗಳಿಗೆ ಸಂಬಂಧಿಸಿದಂತೆ **Action Taken Report (ATR)** ಅನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಲು ತಿಳಿಸಲಾಗಿತ್ತು. ಈವರೆಗೂ ಇನ್ನೂ ಅನೇಕ ಕಾಲೇಜುಗಳು **Action Taken Report (ATR)** ಅನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅಂತಹ ಕಾಲೇಜುಗಳ 2024-25ನೇ ಸಾಲಿನ ಸಂಯೋಜನಾ ಅರ್ಜಿ ಊರ್ಜಿತಗೊಳ್ಳುವುದಿಲ್ಲ. ಆದಕಾರಣ ತಕ್ಷಣ ATR ಅನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ತಾವೇ ಮುಂದಿನ ಸಮಸ್ಯೆಗಳಿಗೆ ಕಾರಣರಾಗುತ್ತಿರಿ.
2. ತಮ್ಮ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರಗಳನ್ನು UUCMS ನ HR Module ನಲ್ಲಿ ನವೀಕರಿಸಬೇಕು ಮತ್ತು ಸಂಯೋಜನಾ ಅರ್ಜಿ ಸಲ್ಲಿಸಲು ಎಲ್ಲಾ ದಾಖಲೆಗಳನ್ನು ಪೂರ್ವ ತಯಾರಿಯಲ್ಲಿ ಇಟ್ಟುಕೊಳ್ಳಬೇಕಾಗಿ ಸೂಚಿಸಲಾಗಿದೆ.
3. ಹಲವು ಕಾಲೇಜುಗಳ ಪ್ರಾಂಶುಪಾಲರು ಬದಲಾವಣೆಯಾಗಿರುವುದು ವಿಶ್ವವಿದ್ಯಾಲಯದ ಗಮನಕ್ಕೆ ಬಂದಿದ್ದು, ಅಂತಹ ಮಾಹಿತಿಯನ್ನು ತಕ್ಷಣ ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗಕ್ಕೆ ತಿಳಿಸತಕ್ಕದ್ದು. ಸಂಯೋಜನೆಗೆ ಸಂಬಂಧಿಸಿದ CDC Raichur University ಅನ್ನುವ WhatsApp ಗ್ರೂಪನಲ್ಲಿ ಪ್ರಾಚಾರ್ಯರ ಹೆಸರು ಸೇರಿಸಲಾಗುವುದು. ಮಾಹಿತಿಯನ್ನು ಕಾಲಕಾಲಕ್ಕೆ ವಿಶ್ವವಿದ್ಯಾಲಯವು Whatsapp ಮೂಲಕ ಮತ್ತು ರಾಯಚೂರು ವಿಶ್ವವಿದ್ಯಾಲಯದ Website ಮೂಲಕ ನೀಡಲಾಗುತ್ತದೆ, ತಪ್ಪದೇ ಎಲ್ಲಾ ಪ್ರಾಚಾರ್ಯರು ಪ್ರತಿದಿನ ತಮ್ಮ WhatsApp Message ನ್ನು ಮತ್ತು ರಾಯಚೂರು ವಿಶ್ವವಿದ್ಯಾಲಯದ ವೆಬ್ ಸೈಟ್ ಸಂಪರ್ಕಿಸಿ ಮಾಹಿತಿ ಪಡೆದು ಕಾರ್ಯಪ್ರವೃತ್ತರಾಗಲು ಸೂಚಿಸಲಾಗಿದೆ.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳ
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಪ್ರತಿಗಳು :

1. ಪ್ರಾಂಶುಪಾಲರು, ಸಂಯೋಜಿತ ಮಹಾವಿದ್ಯಾಲಯಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಕುಲಸಚಿವರ/ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಕಛೇರಿ ಪ್ರತಿ.